ಶ್ರೀ ಬಸವರಾಜ ರಾಯರೆಡ್ಡಿ : ತಾವು Fast track court ಬಗ್ಗೆ ಹೇಳಿಲ್ಲ. Fast track court ಮಾಡಲೇಬೇಕಾಗುತ್ತದೆ. ಆದ್ದರಿಂದ ಅದನ್ನು ಸದನಕ್ಕೆ ಹೇಳುವುದು ಉತ್ತಮ.

ಶ್ರೀ ಸಿದ್ದರಾಮಯ್ಯ : ಅದನ್ನು ಮಾಡೋಣ.

ಅಧ್ಯಕ್ಷರು : ಅದು ಇಲ್ಲಿ ಬರುವುದಿಲ್ಲ.

ಶ್ರೀ ಈ ತುಕಾರಾಂ : ಸರ್ಕಾರಕ್ಕೆ ಸಂದಾಯವಾದ ರಾಜಧನ 2011–12ನೇ ಸಾಲಿನಲ್ಲಿ ಸರ್ಕಾರಕ್ಕೆ ಸಂದಾಯವಾಗಿದೆ. ಏಕೆಂದರೆ FBT permit ಕೂಡ ಸರ್ಕಾರ ಕೊಟ್ಟಿದೆ. ಇದರಲ್ಲಿ Nil ಎಂದು ಬರೆದಿದ್ದಾರೆ. 2011–2012, 2012–2013 ಎರಡು ವರ್ಷದಲ್ಲಿ mostly ಅಧಿಕಾರಿಗಳು ಬಿಟ್ಟಿರಬಹುದು, ದಯಮಾಡಿ ಅದನ್ನು ನೋಡಿಕೊಳ್ಳಬೇಕು. ಬಳ್ಳಾರಿ ಜಿಲ್ಲೆಯಲ್ಲಿ Total ಉತ್ಪಾದಿಸಿದ Quality ಮತ್ತು ಮೊತ್ತವನ್ನು ಲಕ್ಷ ರೂ.ಗಳಲ್ಲಿ mention ಮಾಡಿದ್ದಾರೆ. ಆದರೆ 2011–2012ನೇ ಸಾಲಿಗೆ ಇ–ಟೆಂಡರ್ ಮುಖಾಂತರ amount ಆಗಿದೆ. FBT and permit figure ಅನ್ನು ಅಧಿಕಾರಿಗಳು ಕೊಡಬೇಕಾಗಿತ್ತು. Forest permit and Geological permit ನ ಮೊತ್ತವನ್ನು ತೋರಿಸಬೇಕಾಗಿತ್ತು. ಅದು ಇ–ಟೆಂಡರ್ ನಲ್ಲಿ ಆಗುತ್ತಿದೆ. ಅಂದರೆ ಸ್ಪಾಟ್ ಇರುವ quantity ಪರ್ಮಿಟ್ ತೆಗೆದುಕೊಂಡು move ಮಾಡಿಲ್ಲ.

ಅಧ್ಯಕ್ಷರು : ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಸಿದ್ದರಾಮಯ್ಯ ; ಮಾಹಿತಿ ಕೊಡುತ್ತೇವೆ.

ಅಧ್ಯಕ್ಷರು : O.K. ಮುಂದಿನ ಪ್ರಶ್ನೆ.

ಒಳಚರಂಡಿಯಿಂದ ಬರುವ ನೀರನ್ನು ಸಂಸ್ಕರಿಸುವ ಬಗ್ಗೆ

117 (648) ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್. (ಚಿತ್ರದುರ್ಗ) :– ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ನಗರದ ಬೆನ್ನಿಗಾನಹಳ್ಳಿ ವಾರ್ಡ್ ನಂ. 50 ರಲ್ಲಿರುವ ಕಸ್ತೂರಿನಗರದ (ಎರಡು ಭಾಗದ) ಒಳಚರಂಡಿ (UGD)ಯಿಂದ ಬರುವ ತ್ಯಾಜ್ಯಯುಕ್ತ ನೀರಿಗೆ Sewerage Treatment Plantನ ವ್ಯವಸ್ಥೆ ಮಾಡದಿರುವುದರಿಂದ ದುಷ್ಪರಿಣಾಮಗಳು ಉಂಟಾಗಿ ಅಲ್ಲಿನ ನಾಗರೀಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

(ಇ) ಬಿ.ಡಿ.ಎ ಯವರು ಕಸ್ತೂರಿನಗರ ಬಡಾವಣೆಯನ್ನು ನಿರ್ಮಿಸಿ, ಅಭಿವೃದ್ಧಿಪಡಿಸಿ, ಬಿ.ಬಿ.ಎಂ.ಪಿ.ಗೆ ವರ್ಗಾಯಿಸಿ 20 ವರ್ಷಗಳಾದರೂ ಇದುವರೆವಿಗೂ Sewerage ನೀರನ್ನು ಸಂಸ್ಕರಿಸುವ ವ್ಯವಸ್ಥೆ ಮಾಡದೆ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಮಾಡಿರುವ ಕರ್ತವ್ಯ ಲೋಪಕ್ಕೆ ಸಂಬಂಧಿಸಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

(ಅ) ಈ ಪ್ರದೇಶದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಯುಕ್ತ ನೀರನ್ನು ಸಂಸ್ಕರಿಸಲು 2004 ರಲ್ಲಿ ಕಾಡಬಿಸನಹಳ್ಳಿಯಲ್ಲಿ 50 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಸಂಸ್ಕರಣ ಘಟಕವನ್ನು (SewerageTreatment Plant) ಈಗಾಗಲೇ ಸ್ಥಾಪಿಸಲಾಗಿದೆ.

(ಆ) ಈ ಪ್ರದೇಶಕ್ಕೆ ಜಲಮಂಡಳಿಯು 1990ರ ದಶಕದಲ್ಲಿ ನೀರು ಸರಬರಾಜು ಮತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಬಹುಮಹಡಿ ಕಟ್ಟಡಗಳು ಹಾಗೂ ಜನಸಂಖ್ಯೆಯು ಸಾಂದ್ರತೆ ಹೆಚ್ಚಾದ ಕಾರಣ ಸದರಿ ಒಳಚರಂಡಿ ವ್ಯವಸ್ಥೆಯ ಮೇಲೆ ಬಹಳ ಒತ್ತಡ ಉಂಟಾದ ಕಾರಣ ಹೆಚ್ಚಿನ ಗಾತ್ರದ ಒಳಚರಂಡಿ ಕೊಳವೆ ಮಾರ್ಗವನ್ನು (Trunk Sewer) ಅಳವಡಿಸುವ ಕಾಮಗಾರಿಯನ್ನು ಮಂಡಲಿಯು ಕೈಗೆದುಕೊಂಡಿದೆ ಹಾಗೂ ಸದರಿ ಕಾಮಗಾರಿಯನ್ನು ಇನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ಈ ಪ್ರದೇಶದ ತ್ಯಾಜ್ಯ ನೀರನ್ನು ಕಾಡಬಿಸನಹಳ್ಳಿಯ ಸಂಸ್ಕರಣ ಘಟಕಕ್ಕೆ Trunk Sewer ಮುಖಾಂತರ ಸಾಗಿಸಿ

ಸಂಸ್ಕರಿಸಲಾಗುವುದು. ತದನಂತರ ಈ ಪ್ರದೇಶದಲ್ಲಿ ಯಾವುದೇ ರೀತಿಯ ತೊಂದರೆಗಳಿರುವುದಿಲ್ಲ.

(ಇ) ಸದರಿ ಬಡಾವಣೆಯನ್ನು ಬಿ.ಡಿ.ಎ. ವತಿಯಿಂದ ಅಭಿವೃದ್ಧಿಪಡಿಸಿದ ಸಮಯದಲ್ಲೇ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ನಂತರ 2004ರಲ್ಲಿ ಕಾಡಬಿಸನಹಳ್ಳಿಯಲ್ಲಿ 50 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಸಂಸ್ಕರಣ ಘಟಕವನ್ನು ಸಹ ಮಂಡಲಿಯು ಸ್ಥಾಪಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಪ್ರದೇಶದಲ್ಲಿ ನಿರೀಕ್ಷೆಗೂ ಮೀರಿದ ಬೆಳವಣಿಗೆ ಆದ ಕಾರಣ ಸದರಿ ಒಳಚರಂಡಿ ವ್ಯವಸ್ಥೆಯಲ್ಲಿ ತೊಂದರೆ ಉಂಟಾಗಿರುವುದು. ಇದನ್ನು ಸರಿಪಡಿಸಲು ಮಂಡಲಿಯು ವಿವಿಧ ಗಾತ್ರದ (600, 800, 900 ಮತ್ತು 1200 ಎಂ ಎಂ) ಸುಮಾರು 12 ಕಿ.ಮೀ ಉದ್ದದ ತ್ಯಾಜ್ಯ ನೀರಿನ ಕೊಳವೆ ಮಾರ್ಗದ ಕಾಮಗಾರಿಗಳನ್ನು ಕೈಗೊಂಡಿದೆ. ಮಂಡಲಿಯು ಮೇಲೆ ತಿಳಿಸಿರುವ ಕಾಮಗಾರಿಗಳನ್ನು ಕಾಲಕಾಲಕ್ಕೆ ತೆಗೆದುಕೊಳ್ಳುತ್ತಿರುವುದರಿಂದ ಈ ಸಂಬಂಧ ಯಾವುದೇ ಕರ್ತವ್ಯ ಲೋಪವಾಗಿರುವುದಿಲ್ಲ.

ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್ ಅಧ್ಯಕ್ಷರೆ, ಕಸೂರಿ ನಗರದ 50, 51ನೇ ವಾರ್ಡ್‌ನ್ನು ಸುಮಾರು 20 ವರ್ಷಗಳ ಹಿಂದೆ BBMP ಗೆ ವರ್ಗಾಯಿಸಲಾಗಿದೆ. ಅಲ್ಲಿ ವಾಸ ಮಾಡತಕ್ಕಂಥವರು ಒಳಚರಂಡಿ ವ್ಯವಸ್ಥೆಯ ಅವ್ಯವಸ್ಥೆಯಿಂದ ಅಲ್ಲಿನ ಮನೆಗಳನ್ನು ಖಾಲಿ ಮಾಡುವ ಪರಿಸ್ಥಿತಿಯಲ್ಲಿದ್ದಾರೆ. ಅಲ್ಲಿ Sewerage Treatment Plant ಅನ್ನು ಅಳವಡಿಸಲಾಗಿದೆಯೆಂದು ಹೇಳಿದ್ದಾರೆ. ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ನೆಪದಲ್ಲಿ ಬಹುಮಹಡಿಯ ಕಟ್ಟಡಗಳು ಮತ್ತು ಒತ್ತಡ ಹೆಚ್ಚಾಗಿರುವುದರಿಂದ ಸ್ವಲ್ಪ ಅವ್ಯವಸ್ಥೆಯಾಗಿದೆ ಎಂದು ಹೇಳಿದ್ದಾರೆ. ಆ ಅವ್ಯವಸ್ಥೆಯನ್ನು ಸರಿಮಾಡುವುದಕೋಸ್ಕರ ಕೆಲಸವನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ. ಆ ಕೆಲಸವನ್ನು ಯಾವಾಗ ಪ್ರಾರಂಭ ಮಾಡಿದ್ದಾರೆ ಮತ್ತು ಯಾವಾಗ ಮುಕ್ತಾಯ ಮಾಡಿದ್ದಾರೆ ಮತ್ತೆ ಅಲ್ಲಿರತಕ್ಕಂಥ ಕ್ಷೇಮಾಭಿವೃದ್ಧಿ ಸಂಘದವರು ಅನೇಕ ಅಧಿಕಾರಿಗಳನ್ನು ಭೇಟಿ ಮಾಡಿ ಸಾಕಷ್ಟು ಬಾರಿ ಒತ್ತಾಯ ಮಾಡಿದರೂ ಕೂಡ ಅವರಿಗೆ ಪ್ರತಿಫಲ ಸಿಕ್ಕಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಕೆಲಸ ಪ್ರಾರಂಭವಾಗಿದೆಯೆಂದು ಏನು

ಉತ್ತರವನ್ನು ಕೊಟ್ಟಿದ್ದಾರೆ ಆ ಕೆಲಸವು ಯಾವಾಗ ಪ್ರಾರಂಭವಾಯಿತು? ಯಾವಾಗ ಅದನ್ನು ಮುಕ್ತಾಯಗೊಳಿಸುತ್ತೀರಿ?

ಶ್ರೀ ಸಿದ್ದರಾಮಯ್ಯ: ಮಾನ್ಯ ತಿಪ್ಪಾರೆಡ್ಡಿಯವರೇ, ತಾವು ಆನಂದನಗರದಲ್ಲಿದ್ದೀರಾ? ಕಸ್ತೂರಿನಗರದಲ್ಲಿದ್ದೀರಾ?

ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್: ತಾವು ಈ ಪ್ರಶ್ನೆಯನ್ನು ಕೇಳುತ್ತೀರಿ ಎಂದು ನನಗೆ ಗೊತ್ತಿತ್ತು. ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳಿದೆ ಅಂದರೆ ನಮ್ಮ ಜಿಲ್ಲೆಯ ಅನೇಕ ಜನ ಅಲ್ಲಿ ವಾಸ ಮಾಡುತ್ತಿದ್ದಾರೆ. ಅವರು ತಮ್ಮ ಸಮಸ್ಯೆಯನ್ನು ಹೇಳಿದ್ದಕ್ಕೋಸ್ಕರ ನಾನು ಕೇಳಿದೆ. ಬೆಂಗಳೂರು ನಗರದ.....

ಶ್ರೀ ಸಿದ್ದರಾಮಯ್ಯ: ಕೇಳಿದರೆ ತಪ್ಪೇನೂ ಇಲ್ಲ. ಕೇಳಬಹುದು. ನೀವು ಅಲ್ಲಿ ಇದ್ದೀರಾ ಎಂದು ಕೇಳಿದೆ ಅಷ್ಟೆ. ಕೇಳಬಾರದು ಅಂಥ ಏನೂ ಇಲ್ಲ. ಕರ್ನಾಟಕದಲ್ಲಿ ಯಾವ ಭಾಗದಲ್ಲಿದ್ದರೂ ಕೇಳಬಹುದು.

ಮಾನ್ಯ ಅಧ್ಯಕ್ಷರೆ, ಇದಕ್ಕೆ ಸುಮಾರು 90ರ ದಶಕದಲ್ಲೇ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಇವತ್ತಿನ ದಿವಸ ಅಲ್ಲಿ ಬಹುಮಹಡಿ ಕಟ್ಟಡಗಳು ಬಂದು ಜನಸಂಖ್ಯೆಯ ಸಾಂದ್ರತೆ ಜಾಸ್ತಿಯಾಗಿರುವುದರಿಂದ ಪೈಪ್‌ಗಳನ್ನು ಹಾಕಿದ್ದರಲ್ಲಾ, ಆ ಪೈಪ್‌ಗಳು ಬಹಳ ಚಿಕ್ಕದಾಗಿವೆ. ಈಗ ದೊಡ್ಡ ಪೈಪ್‌ಗಳನ್ನು ಹಾಕುವುದಕ್ಕೆ ಕಾರ್ಯಕ್ರಮ ಪ್ರಾರಂಭವಾಗಿದೆ. ಆ ಕೆಲಸವನ್ನು ಎರಡು ತಿಂಗಳಿನಲ್ಲಿ ಮುಗಿಸುತ್ತೇವೆ. ಇನ್ನೂ ಎರಡು ತಿಂಗಳಿನಲ್ಲಿ ಮುಗಿಸಿ, ಅಲ್ಲಿ ಏನು ತೊಂದರೆ ಇದೆ ಆ ತೊಂದರೆಯನ್ನು ನಿವಾರಿಸುವ ಕೆಲಸ ಆಗುತ್ತದೆ.

ಮಾನ್ಯ ಸದಸ್ಯರು: ನಾನು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು: ಅದಕ್ಕೆ ಉತ್ತರ ಬರುತ್ತದೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು ಉಪಪ್ರಶ್ನೆ. ಇವತ್ತು ಕಸ್ತೂರಿನಗರದಲ್ಲಿ ಬಡಾವಣೆಗಳು, ಬಹುಮಹಡಿ ಕಟ್ಟಡಗಳು ಬಂದಿರುವುದರಿಂದ

ಹಾಕಿದ್ದ ಪೈಪುಗಳ capacity ಕಡಿಮೆ ಇದೆ. ಈಗ ಅದನ್ನು enhance ಮಾಡುತ್ತೀರಿ, ಸರಿ ಒಪ್ಪುತ್ತೇನೆ. ಆದರೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಮಲ್ಲೇಶ್ವರಂನಲ್ಲಿ, ಬೇರೆ ಬೇರೆ ಬಡಾವಣೆಗಳಲ್ಲಿ ಹಳೆಯ ಕಟ್ಟಡಗಳನ್ನು ತೆಗೆದು ಬಹುಮಹಡಿ ಕಟ್ಟಡಗಳು ಬರುತ್ತವೆ. ಹೀಗೆ ಬಹುಮಹಡಿ ಕಟ್ಟಡಗಳು ಬಂದಾಗ ಅಲ್ಲಿಯೂ ಮತ್ತೆ ಇದೇ ಸಮಸ್ಯೆ ಬರುತ್ತವೆ. ಅದಕ್ಕೋಸ್ಕರ ಸರ್ಕಾರದವರು ಮುಂದೆ ಈ ರೀತಿ ಅಭಿವೃದ್ಧಿ ಆಗತಕ್ಕಂತಹ ....

ಅಧ್ಯಕ್ಷರು: ಪ್ರಶ್ನೆ ಕೇಳಿ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ: Calling Attention ಕೊಟ್ಟಿದ್ದೆ. ತಾವು ಇದರಲ್ಲಿ list ಮಾಡಿಲ್ಲ.

ಅಧ್ಯಕ್ಷರು: ಈಗ ಬೇಡ. Calling Attention ಬಂದಾಗ ಚರ್ಚೆ ಮಾಡೋಣ. ಮಾನ್ಯ ಬಸವರಾಜ ರಾಯರೆಡ್ಡಿಯವರೆ, ತಮ್ಮ ಪ್ರಶ್ನೆ ಸಂಖ್ಯೆ 639ಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಚಿವರು ಒಂದು ವಾರಗಳ ಕಾಲಾವಕಾಶ ಕೇಳಿದ್ದಾರೆ.

ಪಂಪ್‌ಸೆಟ್ ಕೊಳವೆ ಬಾವಿ ಸಕ್ರಮಗೊಳಿಸುವುದು

111 (1055) ಶ್ರೀ ಸುಧಾಕರ್ ಲಾಲ್. ಪಿ.ಆರ್ (ಕೊರಟಗೆರೆ):– ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರು ಕೊರೆಸಿರುವ ಪಂಪ್ ಸೆಟ್ ಕೊಳವೆ ಬಾವಿಗಳಿಗೆ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಸಕ್ರಮಗೊಳಿಸಲು ಕಳೆದ 2 ವರ್ಷಗಳ ಹಿಂದೆಯೇ ಹಣ ಸಂದಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಸಕ್ರಮಗೊಳಿಸದೇ ಇರಲು ಕಾರಣಗಳೇನು; (ಪೂರ್ಣ ವಿವರ ನೀಡುವುದು)

(ಇ) ಮೂಲಭೂತ ಸೌಕರ್ಯಗಳೊಂದಿಗೆ ಯಾವಾಗ ಸಕ್ರಮಗೊಳಿಸಲಾಗುವುದು? (ಪೂರ್ಣ ವಿವರ ನೀಡುವುದು)